ದಿಃ **01.03.2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 1, 3 ರಿಂದ 6 ನೇ ಆರೋಪಿತರ ಪರ ಶ್ರೀ ಎಸ್ ಬಿ ವಕೀಲರಿಂದಃ</u>**

1. ವಿಜಯಕಾಂತ್‌ನನ್ನು ನೋಡಿ ಯಾರೋ ಗ್ಯಾಂಗ್ ನಲ್ಲಿ ಬಂದು ಇವನು ಇಲ್ಲೇ ಇದ್ದಾನೆ ಹಾಕಿರೋ ಎಂದು ಲಾಂಗ್ ನಿಂದ ಅವನ ತಲೆಗೆ ಹೊಡೆಯಲು ಬಂದರು ಎಂಬ ವಿಷಯ ನನಗೆ ವಿಜಯಕಾಂತ್ ಹೇಳಿದ್ದರಿಂದ ಗೊತ್ತಾಗಿದೆ ಎಂದರೆ ಸರಿಯಲ್ಲ. ಯಾರೋ ಗ್ಯಾಂಗ್ ನಲ್ಲಿ ಬಂದು ವಿಜಯಕಾಂತ್ ನನ್ನು ನೋಡಿ ಇವನು ಇಲ್ಲೇ ಇದ್ದಾನೆ ಹಾಕಿರೋ ಎಂಬ ವಿಷಯವನ್ನು ನಾನು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಆಗ ಹತ್ತು ಜನರ ಗ್ಯಾಂಗ್ ಅವನಲ್ಲ ಇವನು ಎಂದು ಹೇಳಿದರು ಎಂಬ ವಿಷಯವನ್ನು ನಾನು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಗ್ಯಾಂಗ್ ಅನ್ನೋ ಪದ ಕೋರ್ಟಿಗೆ ಹೇಳಿದ್ದೀರಿ ಗ್ಯಾಂಗ್ ಅನ್ನೋ ಪದ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿದಾರರು ಹತ್ತು ಜನ ಬಂದಿದ್ದರಿಂದ ಗ್ಯಾಂಗ್ ಎಂದು ಹೇಳಿದ್ದೇನೆ ಎನ್ನುತ್ತಾರೆ. ಗ್ಯಾಂಗ್ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಲೈವ್ 100 ಆಸ್ಪತ್ರೆಯ ಹತ್ತಿರ ನಾನು ಹೋಗಿದ್ದೆ. ನಾನು ಮತ್ತು ನನ್ನ ಸ್ನೇಹಿತ ಗುರುಸ್ವಾಮಿ ಲೈವ್ 100 ಆಸ್ಪತ್ರೆ ಹತ್ತಿರ ಹೋಗಿದ್ದೆವು. ನಾವು ರಾತ್ರಿ 10.30 ಕ್ಕೆ ಲೈವ್ 100 ಗೆ ಹೋಗಿದ್ದೆವು. ಅಲ್ಲಿ ರಾತ್ರಿ 12 ಘಂಟೆಯವರೆಗೆ ಇದ್ದೆವು. ರಾತ್ರಿ 12 ಘಂಟೆಯ ನಂತರ ವೆಂಕಟೇಶ್ವರ ಆಸ್ಪತ್ರೆಯ ಹತ್ತಿರ ಇದ್ದೆವು. ರಾತ್ರಿ 12 ಘಂಟೆಯವರೆಗೆ ವೆಂಕಟೇಶ್ವರ ಆಸ್ಪತ್ರೆಯಲ್ಲಿ ಇದ್ದೆವು. ಲೈವ್ 100 ಆಸ್ಪತ್ರೆ ಹತ್ತಿರ ರಾತ್ರಿ 10.30 ರಿಂದ 12.00 ಘಂಟೆಯರೆಗೆ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸ್ಪರ್ಶ್ ಆಸ್ಪತ್ರೆಗೆ ನಾನು ಹೋಗಿಲ್ಲ. ರಾತ್ರಿ 10.30 ರಿಂದ 12.00 ಘಂಟೆಯವರೆಗೆ ಲೈವ್ 100 ಆಸ್ಪತ್ರೆಯ ಬಳಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸಾಕ್ಷಿದಾರರು ವೆಂಕಟೇಶ್ವರ ಆಸ್ಪತ್ರೆಯ ಹತ್ತಿರ ನಡೆದಿದೆ ಎನ್ನುತ್ತಾರೆ. ಲೈವ್ 100 ಆಸ್ಪತ್ರೆಯಿಂದ ವೆಂಕಟೇಶ್ವರ ಆಸ್ಪತ್ರೆ 2 ಕಿಮೀ ದೂರದಲ್ಲಿದೆ. ಸದರಿ ಎರಡು ಆಸ್ಪತ್ರೆಯ ಮಧ್ಯೆ 8 ಕಿಮೀ ಅಂತರ ಇದೆ ಎಂದರೆ ಸರಿಯಲ್ಲ. ರಾತ್ರಿ 10.30 ರಿಂದ 12.00 ಘಂಟೆಯವರೆಗೆ ಲೈವ್ 100 ಆಸ್ಪತ್ರೆಯಲ್ಲಿ ಯಾರೆಲ್ಲಾ ಇದ್ದಿರಿ ಎಂದರೆ ಸಾಕ್ಷಿದಾರರು ನಾನು ಮತ್ತು ನನ್ನ ಸ್ನೇಹಿತ

ಗುರುಸ್ವಾಮಿ ಇದ್ದೆವು ಎನ್ನುತ್ತಾರೆ. ಲೈವ್ 100 ಆಸ್ಪತ್ರೆಯಲ್ಲಿ ಪೋಲಿಸರನ್ನು ನೋಡಿಲ್ಲ. ಲೈವ್ 100 ಆಸ್ಪತ್ರೆಯಲ್ಲಿ ಮಂಗಮ್ಮ, ಆನಂದ್, ವಿಜಯಕಾಂತ್, ಮಂಜುನಾಥ ಇವರನ್ನು ನೋಡಿದ್ದೀರಾ ಎಂದರೆ ಸಾಕ್ಷಿದಾರರು ಆನಂದ್ ನನ್ನು ನೋಡಿದ್ದೆ ಎನ್ನುತ್ತಾರೆ. ಆಸ್ಪತ್ರೆಯ ಒಳಗೆ ಆನಂದ್ ಚಿಕಿತ್ಸೆ ಪಡೆಯುವಾಗ ಆತನನ್ನು ನೋಡಿದ್ದೇನೆ.

4. ನಾನು ಆಟೋ ಚಾಲಕನಿದ್ದೇನೆ ಎಂದರೆ ಸರಿ. ದಿಃ28.02.2012 ರಂದು ರಾತ್ರಿ ನಾನು ಆಟೋ ಓಡಿಸುತ್ತಿದ್ದೆ ಎಂದರೆ ಸಾಕ್ಷಿದಾರರು ನಾನು ಮನೆಯಲ್ಲಿದ್ದೆ, ಆನಂದ್ ಫೋನ್ ಮಾಡಿದ್ದರಿಂದ ನಾನು ಆಸ್ಪತ್ರೆಯ ಹತ್ತಿರ ಹೋದೆ ಎನ್ನುತ್ತಾರೆ. ಆನಂದ್ ನನಗೆ ಫೋನ್ ಮಾಡಿಲ್ಲ ಎಂದರೆ ಸರಿಯಲ್ಲ. ಆನಂದ್ ನನಗೆ ಪರಿಚಯಸ್ಥನಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಆತ ನನ್ನ ಸ್ನೇಹಿತ ಎನ್ನುತ್ತಾರೆ. ಲೈವ್ 100 ಆಸ್ಪತ್ರೆಯಿಂದ ವೆಂಕಟೇಶ್ವರ ಆಸ್ಪತ್ರೆಗೆ ಹೋಗುವ ಅವಶ್ಯಕತೆ ನಿಮಗೆ ಇರಲಿಲ್ಲ ಎಂದರೆ ಸಾಕ್ಷಿದಾರರು ಆನಂದ್ ನನ್ನು ನೋಡಲು ಹೋಗಿದ್ದೆ ಎನ್ನುತ್ತಾರೆ. ಲೈವ್ 100 ಆಸ್ಪತ್ರೆಯಿಂದ ಆನಂದ್ ವೆಂಕಟೇಶ್ವರ ಆಸ್ಪತ್ರೆಗೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಲೈವ್ 100 ಆಸ್ಪತ್ರೆಯಲ್ಲಿ ರಾತ್ರಿ 10.30 ರಿಂದ 12.00 ಘಂಟೆಯವರೆಗೆ ಪೋಲಿಸರು ಸಹ ಇದ್ದು ಎಂದರೆ ಸರಿ. ಅಲ್ಲಿ ಆಗ ಪೋಲಿಸರು ನನ್ನನ್ನು ವಿಚಾರಿಸಿಲ್ಲ.

5. ಘಟನೆಯಾದ ಆರು ತಿಂಗಳ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ನನ್ನನ್ನು ಮತ್ತು ನನ್ನ ಸ್ನೇಹಿತ ಗುರುಸ್ವಾಮಿಯನ್ನು ಕರೆಸಿದ್ದರು. ಆಗ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪೋಲಿಸರು ಬರೆದುಕೊಂಡರು. ನಿಮ್ಮ ಹೆಸರು ಮತ್ತು ವಿಳಾಸವನ್ನು ಮಂಗಮ್ಮ ಇವರು ಪೋಲಿಸರಿಗೆ ನೀಡಿದ್ದಾರೆ ಎಂದರೆ ಸಾಕ್ಷಿದಾರರು ಆರು ತಿಂಗಳ ನಂತರ ಕರೆಸಿದ್ದಾಗ ನಾನೇ ಅವರಿಗೆ ನೀಡಿದ್ದೇನೆ ಎನ್ನುತ್ತಾರೆ. ಆರು ತಿಂಗಳ ನಂತರ ಹೋದಾಗ ಪೋಲಿಸರು ನನಗೆ ಆರೋಪಿತರ ಹೆಸರನ್ನು ತಿಳಿಸಿದ್ದಾರೆ ಎಂದರೆ ಸಾಕ್ಷಿದಾರರು ಮೂರು ಜನರ ಹೆಸರು ಗೊತ್ತಿತ್ತು, ಉಳಿದವರ ಹೆಸರು ತಿಳಿಸಿದ್ದಾರೆ ಎನ್ನುತ್ತಾರೆ. ಘಟನೆಯಾದ ಮತ್ತು ಹೇಳಿಕೆ ನೀಡಿದ ಆರು ತಿಂಗಳ ಅವಧಿಯಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ಹತ್ತು ಜನರ ಗ್ಯಾಂಗ್ ನ ಸದಸ್ಯರ ವಯಸ್ಸು, ವಿಳಾಸ, ಚಹರೆ ಇವುಗಳ ಬಗ್ಗೆ ಪೋಲಿಸರು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ.

6. ಆರು ತಿಂಗಳ ನಂತರ ನಾನು ಪೋಲಿಸ್ ಠಾಣೆಗೆ ಹೋದಾಗ ಮು.ಮಾ-6 ಮತ್ತು 7 ಇವುಗಳನ್ನು ನನಗೆ ಪೋಲಿಸರು ತೋರಿಸಿದ್ದಾರೆ ಎಂದರೆ ಸರಿ. ಆ ದಿನ ಠಾಣೆಯಲ್ಲಿ ಪೋಲಿಸರು ತೋರಿಸಿದ ಲಾಂಗ್ ಮತ್ತು ಮಚ್ಚು ನ್ಯಾಯಾಲಯದಲ್ಲಿರುವ ಮು.ಮಾ-6 ಮತ್ತು 7 ಇವುಗಳೇ ಇರುತ್ತವೆ. ನ್ಯಾಯಾಲಯದಲ್ಲಿ ಮು.ಮಾ-6 ಮತ್ತು 7 ಇವುಗಳನ್ನು ಗುರ್ತಿಸುವಾಗ ಠಾಣೆಯಲ್ಲಿ ತೋರಿಸಿದ್ದೇ ನ್ಯಾಯಾಲಯದಲ್ಲಿ ಇರುತ್ತವೆ, ಅವೇ ಎಂದು ಗುರ್ತಿಸಬೇಕು ಎಂದು ಪೋಲಿಸರು ನನಗೆ ಹೇಳಿಕೊಟ್ಟಿದ್ದರು ಎಂದರೆ ಸರಿಯಲ್ಲ. ವಿಜಯಕಾಂತ್ ಮತ್ತು ಆನಂದ್ ಇವರ ಮಾತನ್ನು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ ಎ ಎಲ್ ನಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಘಟನೆಯನ್ನು ನೋಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 2, 7 ಮತ್ತು 9 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು